56 ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ನಗರ

ಎಸ್.ಸಿ.ಸಂಖ್ಯೆ 1319/2024

ಸಿ.ಡಬ್ಲ್ಯೂಃ17 ಪಿ.ಡಬ್ಲ್ಯೂಃ6

ಪ್ರಮಾಣ ವಚನ ಭೋದಿಸಲಾಯಿತು.

ದಿಃ02.03.2026

| | |
|---|---|
| ಹೆಸರು | ಶಿವು |
| ತಂದೆಯ ಹೆಸರು | ಕೃಷ್ಣಪ್ಪ |
| ವಯಸ್ಸು | 31 ವರ್ಷಗಳು |
| ಕೆಲಸ | ಕ್ಯಾಬ್ ಚಾಲಕ |
| ವಾಸ | ಸುಂಕದ ಕಟ್ಟೆ, ಬೆಂಗಳೂರು |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ದಿಃ13.06.2024 ರಂದು ರಾತ್ರಿ 10.00 ಗಂಟೆಗೆ ಡ್ಯೂಟಿ ಮುಗಿಸಿಕೊಂಡು ನಾಗರಬಾವಿ ಕಡೆಯಿಂದ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆ ಕಡೆಗೆ ಹೋಗುತ್ತಿದ್ದೆನು. ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯ ರಸ್ತೆಯಲ್ಲಿ ಜನರು ಸೇರಿದ್ದರು. ಏನಾಗಿದೆ ಅಂತ ನೋಡುವುದಕ್ಕಾಗಿ ಪೊಲೀಸ್ ಠಾಣೆಯ ಬಳಿ ಹೋದೆನು. ಅಲ್ಲಿ ನನಗೆ ಪರಿಚಯ ಇರುವ ಚಾಸಾ 18 ರಾಮಮೂರ್ತಿಯವರು ಸಿಕ್ಕರು. ಪೊಲೀಸ್ ಸಿಬ್ಬಂದಿಯೊಬ್ಬರು ನಮ್ಮ ಬಳಿ ಬಂದು ನಮ್ಮ ಪಿಐ ನಾಗೇಶ್ ಇವರು ಕರೆಯುತ್ತಿದ್ದಾರೆ ಬನ್ನಿ ಅಂತ ಹೇಳಿದರು. ಅಲ್ಲಿ 7 ಜನ ಆರೋಪಿತರನ್ನು ತೋರಿಸಿದರು. ಪಿಐ ನಾಗೇಶ್ ಇವರು ತನ್ನನ್ನು ಸಹಾಯಕ ತನಿಖಾಧಿಕಾರಿಯಾಗಿ ಎ.ಸಿ.ಪಿ.ಚಂದನ್ ಇವರು ನೇಮಕ ಮಾಡಿದ್ದಾರೆ ಅಂತ ತಿಳಿಸಿದರು.

ಗುನ್ನೆ ನಂ.250/2024 ರಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿದರು. ಅದಕ್ಕೆ ನಾವು ಒಪ್ಪಿಕೊಂಡೆವು. ಆರೋಪಿ ವಿನಯ್‌ನನ್ನು ನಾವು ಏನು ಅಂತ ಕೇಳಿದೆವು. ನ್ಯಾಯಾಲಯದ ಮುಂದಿರುವ 10 ನೇ ಆರೋಪಿಯನ್ನು ಸಾಕ್ಷಿದಾರರು ವಿನಯ್ ಎಂದು ಗುರುತಿಸಿರುತ್ತಾರೆ.

10 ನೇ ಆರೋಪಿಯು ನಮಗೆ 1, 2 ಮತ್ತು 14 ನೇ ಆರೋಪಿತರನ್ನು ರಾಜರಾಜೇಶ್ವರಿ ನಗರದ ಜಯಣ್ಣರವರಿಗೆ ಸೇರಿದ ಶೆಡ್‌ಗೆ ಬಿಳಿ ಬಣ್ಣದ ಸ್ಕಾರ್ಪಿಯೋ ಕಾರಿನಲ್ಲಿ ಕರೆದುಕೊಂಡು ಹೋದೆನು ಅಂತ ತಿಳಿಸಿದನು. ವಿಸಿ ಮೂಲಕ ಹಾಜರಾದ 14 ನೇ ಆರೋಪಿಯನ್ನು ಸಾಕ್ಷಿದಾರರು ಪ್ರದೋಷ್ ಅಂತ ಗುರುತಿಸಿರುತ್ತಾರೆ. 14 ನೇ ಆರೋಪಿಯು ರೇಣುಕಾ ಸ್ವಾಮಿಯ ಮೃತ ದೇಹವನ್ನು ಕಾರ್ತಿಕ್, ನಿಖಿಲ್ ಮತ್ತು ಅನು ಇವರು ಕಪ್ಪು ಬಣ್ಣದ ಸ್ಕಾರ್ಪಿಯೋ ಕಾರಿನಲ್ಲಿ ತೆಗೆದುಕೊಂಡು ಹೋಗಿ ಸುಮ್ಮನಹಳ್ಳಿ ಅಪಾರ್ಟ್ ಮೆಂಟ್ ಬಳಿ ಬಿಸಾಕಿರುತ್ತಾರೆ ಅಂತ ತಿಳಿಸಿದರು.

ನಮ್ಮನ್ನು ಖಾಸಗಿ ಜೀಪಿನಲ್ಲಿ, ಈಗ ಮತ್ತೆ ಹೇಳುತ್ತೇನೆ ಪೊಲೀಸ್ ಇಲಾಖೆಯ ವಾಹನದಲ್ಲಿ ನಮ್ಮ ಜೊತೆಗೆ ದೀಪಕ್ ಮತ್ತು ವಿನಯ್ ಇವರೊಂದಿಗೆ ಪೊಲೀಸರು ನಮ್ಮನ್ನು ಕರೆದುಕೊಂಡು ಹೋದರು. ನ್ಯಾಯಾಲಯದ ಮುಂದಿರುವ 13 ನೇ ಆರೋಪಿಯನ್ನು ಸಾಕ್ಷಿದಾರರು ದೀಪಕ್ ಎಂದು ಗುರುತಿಸಿರುತ್ತಾರೆ. ನಾವು ಮಾಗಡಿ ರೋಡ್ ಪೊಲೀಸ್ ಠಾಣೆಯ ಹಿಂಭಾಗಕ್ಕೆ ಹೋದೆವು. ಸ್ಥಳಕ್ಕೆ ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಹಾಗೂ ಕೈ ಬೆರಳು ತಜ್ಞರು ಬಂದಿದ್ದರು. 01-ಎನ್‌ಇ-0006 ವಾಹನದಲ್ಲಿ ಕೂದಲುಗಳು

ಇದ್ದವು. ಆ ಕೂದಲುಗಳನ್ನು ವಶಕ್ಕೆ ಪಡೆದರು. ಕಪ್ಪು ಬಣ್ಣದ ಸ್ಕಾರ್ಪಿಯೋ ಕಾರಿನಲ್ಲಿ ಕೂದಲುಗಳು ಇದ್ದವು. ಅದರ ಸಂಖ್ಯೆ 01-ಎಂಜಿ-7573. ಅದರಲ್ಲಿಯ ಕೂದಲುಗಳನ್ನು ವಶಕ್ಕೆ ಪಡೆದುಕೊಂಡರು. ಕೈ ಬೆರಳಚ್ಚು ತಜ್ಞರು ಪರಿಶೀಲನೆ ಮಾಡಿದರು.

ಕೆಂಪು ಬಣ್ಣದ ಜೀಪಿನಲ್ಲಿ After Dark ಎಂಬ ವಿಸ್ಕಿ ಬಾಟಲ್ ಇತ್ತು. ಬ್ಲೂ ಕಲರ್ ಲೈಟರ್ ಇತ್ತು. ಒಂದು ಬಿಸ್ಲೆರಿ ವಾಟರ್ ಬಾಟಲ್ ಇತ್ತು. ಡೋರ್ ಬಳಿ ಚಾನ್ಸ್ ಪಿಂಗರ್ ಪ್ರಿಂಟ್ ತೆಗೆದುಕೊಂಡರು. ಸಿಕ್ಕಿರುವ ವಸ್ತುಗಳ ಮೇಲಿರುವ ಚಾನ್ಸ್ ಪಿಂಗರ್ ಪ್ರಿಂಟ್ ಗಳನ್ನು ತೆಗೆದುಕೊಂಡರು.

ಕಪ್ಪು ಬಣ್ಣದ ಕಾರಿನಲ್ಲಿ ಚೀವಸ್ ರೀಗಲ್ ಸೆಂಟ್ ಬಾಟಲ್, ಸೋಲೈಮಾ ಎಂಬ ವಾಟರ್ ಬಾಟಲ್, 4 ಬಿಸ್‌ಲೆರಿ ಬಾಟಲ್‌ಗಳನ್ನು ವಶಪಡಿಸಿಕೊಂಡರು. ಆ ವಾಹನದ ಡೋರ್‌ಗಳ ಮೇಲಿರುವ ಚಾನ್ಸ್ ಪಿಂಗರ್ ಪ್ರಿಂಟ್ ತೆಗೆದುಕೊಂಡರು. ಪಿಐ ನಾಗೇಶ್ ಇವರು ತಮ್ಮ ಬಳಿ ಇರುವ ಮೊಬೈಲನ್ನು ತಮ್ಮ ಸಿಬ್ಬಂದಿಗೆ ಕೊಟ್ಟು ನಮ್ಮ ಪೋಟೋಗಳನ್ನು ತೆಗೆದುಕೊಂಡರು.ಆ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಪೋಟೋ ತೆಗೆಯುವ ಕಾಲಕ್ಕೆ ನಂದೀಶ್ ಎಂಬ ಆರೋಪಿ ಇದ್ದನು. ನ್ಯಾಯಾಲಯದ ಮುಂದಿರುವ 5 ನೇ ಆರೋಪಿಯನ್ನು ಸಾಕ್ಷಿದಾರರು ನಂದೀಶ್ ಎಂದು ಗುರುತಿಸಿರುತ್ತಾರೆ. ಅದೇ ರೀತಿಯಾಗಿ ಪುಟ್ಟಸ್ವಾಮಿ ಇದ್ದನು. ನ್ಯಾಯಾಲಯದ ಮುಂದಿರುವ 3 ನೇ ಆರೋಪಿಯನ್ನು ಸಾಕ್ಷಿದಾರರು ಪುಟ್ಟಸ್ವಾಮಿ ಎಂದು ಗುರುತಿಸಿರುತ್ತಾರೆ. ವಿಸಿ ಮೂಲಕ ಹಾಜರಾದ ನಾಗರಾಜ್ ಮತ್ತು ಲಕ್ಷ್ಮಣ್ ಇದ್ದರು, ಅವರನ್ನು ಸಾಕ್ಷಿದಾರರು ಗುರುತಿಸಿದ್ದು ಅವರು ಈ

ಪ್ರಕರಣದ 11 ಮತ್ತು 12 ನೇ ಆರೋಪಿತರಾಗಿರುತ್ತಾರೆ. ಈ ಮೇಲೆ ಹೇಳಿದ ಎಲ್ಲಾ ಕೆಲಸವು ರಾತ್ರಿ 10.30 ರಿಂದ 11.50 ಗಂಟೆಯವರೆಗೆ ಜರುಗಿತು. ಆ ಪೋಟೋಗಳನ್ನು ಈಗ ನೋಡುತ್ತಿದ್ದು ನಿಪಿ.27 ಮತ್ತು ನಿಪಿ.28 ಎಂದು, ಸಾಕ್ಷಿದಾರರು ಇರುವ ಪೋಟೋವನ್ನು ನಿಪಿ.27(ಎ) ಮತ್ತು ನಿಪಿ.28(ಎ) ಎಂದು ಗುರುತಿಸಲಾಯಿತು.

ಪೊಲೀಸರು ತೆಗೆದುಕೊಂಡ ಬಾಟಲ್‌ಗಳನ್ನು ನೋಡಿದರೆ ಗುರುತಿಸುತ್ತೇನೆ. (ಫಿಎಫ್ ನಂ.110/2024 ರಲ್ಲಿಯ ವಸ್ತುಗಳ ಮೇಲಿರುವ ಸೀಲ್‌ಗಳನ್ನು ಪರಿಶೀಲಿಸುವಂತೆ ಆರೋಪಿತರ ಪರ ವಕೀಲರಿಗೆ ಸೂಚಿಸಲಾಯಿತು. ಆರೋಪಿತರ ಪರ ವಕೀಲರು ವಸ್ತುಗಳ ಮೇಲಿರುವ ಸೀಲುಗಳನ್ನು ಪರಿಶೀಲಿಸಿ ಅವುಗಳು ಸುಸ್ಥಿತಿಯಲ್ಲಿವೆ ಎಂದು ದೃಡೀಕರಿಸಿರುತ್ತಾರೆ).

ಫಿಎಫ್ ನಂ.110/2024 ರಲ್ಲಿಯ ಐಟಂ ನಂ.1 ರಲ್ಲಿಯ ಕೂದಲುಗಳನ್ನು ಗುರುತಿಸಿದ್ದು, ಅವುಗಳನ್ನು ಮು.ಮಾ 19 ಎಂದು, ಮು.ಮಾ 19 ನ್ನು ಒಂದು ಕವರಿಗೆ ಹಾಕಿ ಸಾಕ್ಷಿದಾರರ ಸಹಿ ಇರುವ ಚೀಟಿಯನ್ನು ಅಂಟಿಸಿದ್ದು ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 19(ಎ) ಎಂದು ಗುರುತಿಸಲಾಯಿತು.

ಫಿಎಫ್ ನಂ.110/2024 ರಲ್ಲಿಯ ಐಟಂ ನಂ.2 ರಲ್ಲಿಯ ಕೂದಲುಗಳನ್ನು ಗುರುತಿಸಿದ್ದು, ಅವುಗಳನ್ನು ಮು.ಮಾ 20 ಎಂದು, ಮು.ಮಾ 20 ನ್ನು ಒಂದು ಕವರಿಗೆ ಹಾಕಿ ಸಾಕ್ಷಿದಾರರ ಸಹಿ ಇರುವ ಚೀಟಿಯನ್ನು

ಅಂಟಿಸಿದ್ದು ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 20(ಎ) ಎಂದು ಗುರುತಿಸಲಾಯಿತು.

ಬಿಸ್ಲೆರಿ ಬಾಟಲಿಯನ್ನು ಮು.ಮಾ 21 ಎಂದು, ಬಿಳಿ ಬಟ್ಟೆಯ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ.21(ಎ) ಎಂದು, Chivas Regal ವಿಸ್ಕಿ ಬಾಟಲನ್ನು ಮು.ಮಾ 22 ಎಂದು, ಬಿಳಿ ಬಟ್ಟೆಯ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ.22(ಎ) ಎಂದು, ಪಿಂಕ್ ಬಣ್ಣದ ಲೈಟರನ್ನು ಮು.ಮಾ 23 ಎಂದು, ಬಿಳಿ ಬಟ್ಟೆಯ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 23(ಎ) ಎಂದು, 4 ಬಿಸ್ಲೆರಿ ಬಾಟಲ್ ಗಳನ್ನು ಒಟ್ಟಾಗಿ ಮು.ಮಾ 24 ಎಂದು, ಬಿಳಿ ಬಟ್ಟೆಯ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 24(ಎ) ಎಂದು, ಸೆಂಟ್ ಬಾಟಲನ್ನು ಮು.ಮಾ 25 ಎಂದು, ಬಿಳಿ ಬಟ್ಟೆಯ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 25(ಎ) ಎಂದು, Solima ಎಂಬ ಹೆಸರಿನ ವಾಟರ್ ಬಾಟಲನ್ನು ಮು.ಮಾ 26 ಎಂದು, ಬಿಳಿ ಬಟ್ಟೆಯ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 26(ಎ) ಎಂದು ಗುರುತಿಸಲಾಯಿತು.

ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ.28 ಫೋಟೋದಲ್ಲಿ ಕಂಡ ಜೀಪನ್ನು ಗುರುತಿಸಲು ಆಕ್ಷೇಪಿಸಿರುವುದಿಲ್ಲ. ಅದನ್ನು ನಿಪಿ.28(ಬಿ) ಎಂದು, ನಿಪಿ.27 ರಲ್ಲಿ ಕಂಡ ವ್ಯಾಗ್ನರ್ ಜೀಪನ್ನು ನಿಪಿ.27(ಬಿ) ಎಂದು

ಗುರುತಿಸಲಾಯಿತು. ಈ ಎಲ್ಲಾ ಕಾರ್ಯ ಮಾಡಿದ ನಂತರ ಪೊಲೀಸರು ಸ್ಥಳದಲ್ಲಿ ಏನು ಮಾಡಲಿಲ್ಲ.

ಇನ್ನೊಂದು ಪಂಚನಾಮೆ ಇದೆ ಅಂತ ಹೇಳಿದರು. ಅದಕ್ಕೆ ನಾವು ಒಪ್ಪಿ ಕೊಂಡೆವು. ನಮ್ಮನ್ನು ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು. 14 ನೇ ಆರೋಪಿಯನ್ನು ಹೊರತುಪಡಿಸಿ ನಮ್ಮ ಜೊತೆಗೆ ಬಂದಿದ್ದ ಉಳಿದ ಆರೋಪಿತರನ್ನು ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಬಿಡಲಾಯಿತು. ಗಿರೀಶ್ ನಾಯಕ್ ಎಂಬ ಅಧಿಕಾರಿಯು 30 ಲಕ್ಷ ಹಣವನ್ನು ವಶಪಡಿಸಿಕೊಂಡಿರುತ್ತಾರೆ, ಡಿವಿಆರ್ ಮತ್ತು ಬಟ್ಟೆಗಳನ್ನು ಅಮಾನತ್ತುಪಡಿಸಿಕೊಳ್ಳಬೇಕಾಗಿದೆ ಸಹಕರಿಸುವಂತೆ ಹೇಳಿದರು.

14 ನೇ ಆರೋಪಿಯು ಚಿತ್ರದುರ್ಗದ ರೇಣುಕಾ ಸ್ವಾಮಿಯು 1 ನೇ ಆರೋಪಿಗೆ ಅಶ್ಲೀಲ ಮೆಸೇಜ್‌ಗಳನ್ನು ಕಳುಹಿಸಿದ್ದು, 3, 6 ಮತ್ತು 8 ನೇ ಆರೋಪಿತರು ರೇಣುಕಾ ಸ್ವಾಮಿಯನ್ನು ಚಿತ್ರದುರ್ಗದಿಂದ ಟಯೋಟ ಇನೋವ ಗಾಡಿಯಲ್ಲಿ ಕರೆದುಕೊಂಡು ಬಂದಿರುತ್ತಾರೆ ಅಂತ ತಿಳಿಸಿದನು. 3, 10 ಮತ್ತು 14 ನೇ ಆರೋಪಿತರು ರೇಣುಕಾ ಸ್ವಾಮಿ ಮೇಲೆ ಮರದ ದೊಣ್ಣೆ, ಮರದ ಲಾಟಿ, ಶೂ ಕಾಲಿನಿಂದ, ಚಪ್ಪಲಿಯಿಂದ, ಕೈಗಳಿಂದ ಮಾರಣಾಂತಿಕವಾಗಿ ಹಲ್ಲೆ ಮಾಡಿ ಹತ್ಯೆಮಾಡಿರುತ್ತಾರೆ ಅಂತ ತಿಳಿಸಿದರು. ನಂತರ 2 ನೇ ಆರೋಪಿಯನ್ನು ಬರಮಾಡಿಕೊಂಡು ಆತ 30 ಲಕ್ಷ ಹಣ ಕೊಟ್ಟು ತನ್ನ ಹೆಸರು ಬಾರದ ಹಾಗೆ ಬೇರೆಯವರನ್ನು ಅಡ್ಜೆಸ್ಟ್ ಮಾಡಿಕೊಳ್ಳುವಂತೆ ಹೇಳಿದರು ಅಂತ ತಿಳಿಸಿದರು. ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಿಂದ 14 ನೇ ಆರೋಪಿ ಮನೆಗೆ

ಹೋದೆವು. 14 ನೇ ಆರೋಪಿಯ ಸರ್ಕಾರಿ ವಾಹನದಲ್ಲಿ ಬರುತ್ತಾನೆ, ನಾನು ಮತ್ತು ಚಾಸಾ 18 ಇವರು ಭರಣಿ ಎಂಬ ಪಿಎಸ್ಐ ಇವರ ಕಾರಿನಲ್ಲಿ ಹೋಗಿರುತ್ತೇವೆ.

14 ನೇ ಆರೋಪಿಯ ಮನೆಗೆ ಹೋದಾಗ ಆತನ ತಾಯಿ ಮತ್ತು ಹೆಂಡತಿ ಬಾಗಿಲನ್ನು ತೆರೆದರು. ಮನೆಯ ಎಡಭಾಗದಲ್ಲಿ ಡೈನಿಂಗ್ ಟೇಬಲ್ ಇರುತ್ತದೆ. ಸೋಪಾ ಪಕ್ಕದಲ್ಲಿ ಟಿವಿ ಮತ್ತು ಕ್ಯಾಮೆರಾ ಡಿವಿಆರ್ ಇರುತ್ತದೆ. ಪೊಲೀಸರು ಡಿವಿಆರ್ ನ್ನು ವಶಪಡಿಸಿಕೊಂಡರು. 1 ನೇ ಮಹಡಿಗೆ ಕರೆದುಕೊಂಡು ಹೋದರು. ಅಲ್ಲಿ ಜೀನ್ಸ್ ಪ್ಯಾಂಟ್ ಮತ್ತು ಟೀ ಶರ್ಟನ್ನು ವಶಪಡಿಸಿಕೊಂಡರು. ಅವುಗಳನ್ನು ತೆಗೆದುಕೊಂಡು ಠಾಣೆಗೆ ಬಂದರು. ಪೊಲೀಸರು ವಶಪಡಿಸಿಕೊಂಡ ಈ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

(ಫಿಎಫ್ ನಂ.111/2024 ರಲ್ಲಿಯ ವಸ್ತುಗಳ ಮೇಲಿರುವ ಸೀಲ್ ಗಳನ್ನು ಪರಿಶೀಲಿಸುವಂತೆ ಆರೋಪಿತರ ಪರ ವಕೀಲರಿಗೆ ಸೂಚಿಸಲಾಯಿತು. ಆರೋಪಿತರ ಪರ ವಕೀಲರು ವಸ್ತುಗಳ ಮೇಲಿರುವ ಸೀಲುಗಳನ್ನು ಪರಿಶೀಲಿಸಿ ಅವುಗಳು ಸುಸ್ಥಿತಿಯಲ್ಲಿವೆ ಎಂದು ದೃಡೀಕರಿಸಿರುತ್ತಾರೆ).

ಡಿವಿಆರ್ ನ್ನು ಮು.ಮಾ 27 ಎಂದು, ಬಿಳಿ ಬಟ್ಟೆಯ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ.27(ಎ) ಎಂದು, ಜೀನ್ಸ್ ಪ್ಯಾಂಟನ್ನು ಮು.ಮಾ 28 ಎಂದು, ಬಿಳಿ ಬಟ್ಟೆಯ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ.28(ಎ) ಎಂದು, ಟೀ ಶರ್ಟನ್ನು ಮು.ಮಾ 29 ಎಂದು, ಬಿಳಿ ಬಟ್ಟೆಯ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ.29(ಎ)

ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡು ಕೋರ್ಟಿಗೆ ಬರುವಂತೆ ಹೇಳಿ ಬಾಂಡ್ ಬರೆಸಿಕೊಂಡರು. ಆ ಬಾಂಡನ್ನು ನಿಪಿ.29 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ನಿಪಿ.29(ಎ) ಎಂದು ಗುರುತಿಸಲಾಯಿತು. 14 ನೇ ಆರೋಪಿಯ ಮನೆಯಲ್ಲಿ ಪೋಟೋ ತೆಗೆಯಲಾಗಿದೆ. ಅವುಗಳನ್ನು ನಿಪಿ.30 ಮತ್ತು ನಿಪಿ.31 ಎಂದು ಗುರುತಿಸಲಾಯಿತು. 14 ನೇ ಆರೋಪಿಯ ಮನೆಯಲ್ಲಿ ಒಂದು ದಾಖಲಾತಿಗೆ ರುಜು ಮಾಡಿರುತ್ತೇನೆ. ಅದನ್ನು ನಿಪಿ.32 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ನಿಪಿ.32(ಎ) ಎಂದು ಗುರುತಿಸಲಾಯಿತು.

(3 ನೇ ಆರೋಪಿ ಪರ ವಕೀಲರು ಪೊಲೀಸ್ ಕಸ್ಟಡಿಯಲ್ಲಿದ್ದಾಗ ಬರೆದುಕೊಂಡ ತಪ್ಪೊಪ್ಪಿಗೆಯ ಭಾಗವನ್ನು ನಿಪಿ.32 ರಿಂದ ಹೊರತೆಗೆಯುವಂತೆ ಹೇಳಿದ್ದು, ಅದರಂತೆ ನಿಪಿ.32 ರ 2 ನೇ ಪುಟ ಸಂಖ್ಯೆ (ಚಾರ್ಜ್ ಶೀಟ್ ಪುಟ ಸಂಖ್ಯೆ 410) ರಲ್ಲಿಯ 8 ನೇ ಸಾಲಿನಲ್ಲಿರುವ "ನಂತರ ನಾವುಗಳು --------------------------22 ರ ಸಾಲಿನಲ್ಲಿರುವ ನನ್ನ ಕೈಗೆ ನೀಡಿದರು" ಎಂಬ ಭಾಗವನ್ನು ಹೊರತೆಗೆಯಲಾಗಿದೆ).

14 ನೇ ಆರೋಪಿಯ ಮನೆಯ ಮುಂದೆ ಒಂದು ದಾಖಲೆಗೆ ರುಜು ಮಾಡಿರುತ್ತೇನೆ. ಅದನ್ನು ನಿಪಿ.33 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ನಿಪಿ.33(ಎ) ಎಂದು ಗುರುತಿಸಲಾಯಿತು.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕೆಂದು ಸರ್ಕಾರಿ ಅಭಿಯೋಜಕರು ಅನುಮತಿಯನ್ನು ಕೋರಿದರು. ಅನುಮತಿ ನೀಡಲಾಯಿತು).

<u>ಪಾಟಿ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

ವಾಹನಗಳನ್ನು ಅಮಾನತ್ತುಪಡಿಸಿಕೊಂಡ ಮಹಜರ್‌ಗೆ ರುಜು ಮಾಡಿರುತ್ತೇನೆ ಎಂದರೆ ಸರಿ. ಅದನ್ನು ನಿಪಿ.34 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ನಿಪಿ.34(ಎ) ಎಂದು ಗುರುತಿಸಲಾಯಿತು.

(3 ನೇ ಆರೋಪಿ ಪರ ವಕೀಲರು ಪೊಲೀಸ್ ಕಸ್ಟಡಿಯಲ್ಲಿದ್ದಾಗ ಬರೆದುಕೊಂಡ ತಪ್ಪೊಪ್ಪಿಗೆಯ ಭಾಗವನ್ನು ನಿಪಿ.34 ರಿಂದ ಹೊರತೆಗೆಯುವಂತೆ ಹೇಳಿದ್ದು, ಅದರಂತೆ ನಿಪಿ.34 ರ 1 ನೇ ಪುಟ ಸಂಖ್ಯೆ (ಚಾರ್ಜ್ ಶೀಟ್ ಪುಟ ಸಂಖ್ಯೆ 393) ರಲ್ಲಿಯ ಕೊನೆಯ ಸಾಲಿನಲ್ಲಿರುವ "ನಂತರ ಆರೋಪಿಗಳನ್ನು --------------------------- 2 ನೇ ಪುಟದ 18 ಸಾಲಿನಲ್ಲಿರುವ "ಉಪಯೋಗಿಸಿರುವುದಾಗಿ ನುಡಿದಿರುತ್ತಾರೆ" ಎಂಬ ಭಾಗವನ್ನು ಹೊರತೆಗೆಯಲಾಗಿದೆ).

<u>ಪಾಟೀ ಸವಾಲುಃ **3** ನೇ ಆರೋಪಿ ಪರವಾಗಿ ಶ್ರೀ.ಡಿ.ಎಸ್.ಎಸ್ ವಕೀಲರಿಂದಃ</u>

ನಾನು 2 ನೇ ಪಿಯುಸಿವರೆಗೆ ಓದಿದ್ದೇನೆ. ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ನಾನು ರೌಡಿ ಶೀಟರ್ ಎಂದರೆ ಸರಿ. ನಾನು ರೌಡಿ ಶೀಟರ್ ಆಗಿರುವುದರಿಂದ ಆಗಾಗ ನಾನು ಪೊಲೀಸ್ ಠಾಣೆಗೆ ಹೋಗಿ ರುಜು ಮಾಡಬೇಕು ಮತ್ತು ಪೊಲೀಸರು ನಮ್ಮ ಮನೆಗೆ ಬಂದು ರುಜು ಪಡೆಯುತ್ತಾರೆ ಎಂದರೆ ಸರಿ. ಚುನಾವಣೆ ವೇಳೆಯಲ್ಲಿ ಮತ್ತು ಹಬ್ಬದ ದಿನಗಳಲ್ಲಿ ನನ್ನಂತ ರೌಡಿ

ಶೀಟರ್‌ಗಳ ಗುರುತಿನ ಕವಾಯತ್ತು ಮಾಡುತ್ತಾರೆ. ನಿಪಿ.34 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ರುಜು ಮಾಡಿರುತ್ತೇನೆ ಎಂದರೆ ಸರಿ.

ನಿಪಿ.27 ಮತ್ತು 28 ನ್ನು ಮಹಜರ್ ಮಾಡುವ ಕಾಲಕ್ಕೆ ತೆಗೆದಿರುತ್ತಾರೆ. ಚಾನ್ಸ್ ಫ್ರಿಂಗರ್ ಪ್ರಿಂಟ್ ಎಂಬ ಶಬ್ದವನ್ನು ಪೊಲೀಸರು ಹೇಳಿರುವುದರಿಂದ ಸ್ಥಳದಲ್ಲಿ ಗೊತ್ತಾಯಿತು. ಪೌಡರ್ ಹಾಕಿ ಫ್ರಿಂಗರ್ ಪ್ರಿಂಟ್ ತೆಗೆದುಕೊಂಡರು. ನಾನು ರೌಡಿ ಶೀಟರ್ ಆಗಿದ್ದು, ಪೊಲೀಸರು ಹೇಳಿದಂತೆ ಕೇಳದೇ ಇದ್ದಾಗ ತೊಂದರೆ ಕೊಡುತ್ತಾರೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **5** ನೇ ಆರೋಪಿ ಪರವಾಗಿ ಶ್ರೀ**.**ಕೆ**.**ಆರ್**.**ಎಸ್ ವಕೀಲರಿಂದಃ</u>

ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯ ನಮ್ಮ ಮನೆಯಿಂದ 3 ಕಿ.ಮೀ ಅಂತರದಲ್ಲಿದೆ. ನಮ್ಮ ಮನೆಯಿಂದ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯು 3 ಕಿ.ಮೀಗಿಂತ ಹೆಚ್ಚಿನ ದೂರದಲ್ಲಿದೆ ಎಂದರೆ ಸರಿಯಲ್ಲ. ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಗೆ ಬರುವಂತೆ ನನ್ನನ್ನು ಯಾರೂ ಕರೆದಿಲ್ಲ. ನಾನು ಎಲ್ಲಿಯೂ ಹೋಗದೇ ಇದ್ದರೂ ಪೊಲೀಸರು ನನ್ನನ್ನು ಹೆದರಿಸಿ ದಾಖಲಾತಿಗಳಿಗೆ ಮತ್ತು ಮುದ್ದೆಮಾಲುಗಳಿಗೆ ನನ್ನ ರುಜು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರ ಒತ್ತಾಯದ ಮೇಲೆ ರುಜು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಫೋಟೋಗಳನ್ನು ನನ್ನ ಮುಂದೆ ತೆಗೆದಿರುವುದು ಸುಳ್ಳು ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **16** ನೇ ಆರೋಪಿ ಪರವಾಗಿ ಶ್ರೀ**.**ಡಿ **.**ಕೆ ವಕೀಲರಿಂದಃ</u>

ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಮೂರು ಪ್ರಕರಣಗಳು ದಾಖಲಾಗಿದ್ದವು. ಸಾಕ್ಷಿದಾರರು ಮುಂದುವರಿದು ಅವು ಇತ್ಯರ್ಥಗೊಂಡಿದೆ ಎಂದು ನುಡಿದಿರುತ್ತಾರೆ. ಈ ಮೂರು ಪ್ರಕರಣಗಳಲ್ಲಿ ಪೊಲೀಸರು ನನ್ನನ್ನು ಒಂದು ಬಾರಿ ಬಂಧಿಸಿದ್ದರು. ನನ್ನನ್ನು ಭಾ.ದಂ.ಸಂ ಕಲಂ 399, 402 ಶಿಕ್ಷಾರ್ಹ ಅಪರಾಧಗಳಲ್ಲಿ ಬಂಧಿಸಿದ್ದರು. ನನ್ನ ಜೊತೆಗೆ ಯಾರನ್ನು ಬಂಧಿಸಿದ್ದರು ಎಂದು ನೆನಪಿಲ್ಲ. ಮೇಲೆ ಹೇಳಿದ ನನ್ನ ವಿರುದ್ಧ ದಾಖಲಾದ ಪ್ರಕರಣಗಳು ಯಾವ ಕೋರ್ಟಿನಿಂದ ಇತ್ಯರ್ಥಗೊಂಡಿವೆ ಎಂದು ನೆನಪಿಲ್ಲ. ನನ್ನ ವಿರುದ್ಧ ರೌಡಿ ಶೀಟರ್ ತೆರೆದ ಎ.ಸಿ.ಪಿ ಯಾರು ಎಂದು ಎನ್ನುವುದು ನೆನಪಿಲ್ಲ. ರೌಡಿ ಶೀಟರ್ ಆಗಿ ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ರುಜು ಮಾಡಲು ಹೋಗಿದ್ದೆನು.

ಓಲಾ ಮತ್ತು ಊಬರ್ ಕಂಪನಿಯ ಕ್ಯಾಬ್ ಚಾಲಕನಾಗಿದ್ದೆನು. ನಾಗರಬಾವಿಯ ಟ್ರಿಪ್ ಆ ದಿನದ ಕೊನೆಯ ಟ್ರಿಪ್ ಆಗಿತ್ತು. ಕೊನೆಯ ಟ್ರಿಪ್ ಅಂತ ಕಂಪನಿಯವರಿಗೆ ತಿಳಿಸಿದ್ದಿರಾ ಎಂದರೆ ಸಾಕ್ಷಿದಾರರು ಮೊಬೈಲ್‌ನಲ್ಲಿ ಡ್ಯೂಟಿ ಆಫ್ ಮಾಡಿದ್ದೆ ಎಂದು ನುಡಿದಿರುತ್ತಾರೆ. ರಾತ್ರಿ 10.00 ಗಂಟೆ ಸಮಯದಲ್ಲಿ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯ ಬಳಿ ಇದ್ದೆನು. ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯ ಬಳಿ ಏಕೆ ಹೋಗಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾನು ಮನೆಗೆ ಹೋಗುವ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯ ರಸ್ತೆಯಲ್ಲಿ ಜನರು ಸೇರಿರುವುದರಿಂದ ನೋಡುವುದಕ್ಕಾಗಿ ಹೋಗಿದ್ದೆನು ಎಂದು ಉತ್ತರಿಸಿರುತ್ತಾರೆ.

ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯ ಬಳಿ ಸುಮಾರು 50 ರಿಂದ 100 ಜನರು ಸೇರಿದ್ದರು. ಪಿಐ ನಾಗೇಶ್ ಇವರು ನಮ್ಮನ್ನು ಕರೆಸಲು ಕಳುಹಿಸಿದ್ದ ಸಿಬ್ಬಂದಿ ಪೊಲೀಸ್ ಪೇದೆಯಾಗಿದ್ದರು. ಅವರು ಹೆಸರು ಗೊತ್ತಿಲ್ಲ. ಪಿಐ ನಾಗೇಶ್ ಹೆಸರು ಗೊತ್ತಿರಲಿಲ್ಲ. ಪಿಐ ನಾಗೇಶ್ ಇವರು ನನ್ನನೇ ಏಕೆ ಕರೆಸಿರುತ್ತಾರೆ ಎಂದು ಅವರನ್ನೇ ಕೇಳಬೇಕು. 50 – 60 ಜನರಲ್ಲಿ ನನ್ನನ್ನೇ ಏಕೆ ಕರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ರೌಡಿ ಶೀಟರ್ ಶಿವು ಅಂತ ಕರೆದಿರುತ್ತಾರೆ ಎಂದರೆ ಸಾಕ್ಷಿದಾರರು ಅವರಿಗೆ ನಾನು ರೌಡಿ ಶೀಟರ್ ಅಂತ ಗೊತ್ತಿರಲಿಲ್ಲ ಎಂದು ನುಡಿದಿರುತ್ತಾರೆ.

ನಾನು ಪ್ರಖ್ಯಾತ ರೌಡಿ ಶೀಟರ್ ಆಗಿದ್ದು ಎಲ್ಲಾ ಠಾಣೆಗಳಲ್ಲಿ ನನ್ನ ಪೋಟೋ ಇರುವುದರಿಂದ ನನ್ನನ್ನೇ ಪೊಲೀಸ್ ಠಾಣೆಯ ಒಳಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಠಾಣೆಯಲ್ಲಿ ನೋಟೀಸ್ ಕೊಡುವಾಗ ನನ್ನ ಪೋನ್ ನಂಬರನ್ನು ಹೇಳಿರುತ್ತೇನೆ. ನಿನ್ನೆ ನಾನು ಎಲ್ಲಿಯೂ ಹೋಗಿಲ್ಲ.

ನಿಪಿ.34 ರಲ್ಲಿರುವ ನನ್ನ ಹೆಸರು, ವಿಳಾಸ ಮತ್ತು ಪೋನ್ ನಂಬರನ್ನು ಠಾಣೆಯಲ್ಲಿ ಟೈಪ್ ಮಾಡಿರುತ್ತಾರೆ. ಪಿಐ ನಾಗೇಶ್ ಇವರ ಮೊಬೈಲ್ ನಿಂದ ಸಿಬ್ಬಂದಿ ಮೂಲಕ ಪೋಟೋ ತೆಗೆಯಲಾಗಿದೆ. ಆ ಮೊಬೈಲ್ ಯಾವ ಕಂಪನಿಯದೆಂದು ಹೇಳಲು ಆಗುವುದಿಲ್ಲ. ನಿಪಿ.27 ಮತ್ತು 28 ಪೋಟೋಗಳಲ್ಲಿ ಮು.ಮಾ 19 ರಿಂದ 26 ಗಳು ಕಾಣುವುದಿಲ್ಲ.

ಚಾನ್ಸ್ ಫ್ರಿಂಗರ್ ಪ್ರಿಂಟರ್ ಕೈ ಬೆರಳಚ್ಚು ತಜ್ಞರು ತೆಗೆದುಕೊಂಡಿದ್ದರು. ಇಬ್ಬರು ತಜ್ಞರು ಬಂದಿದ್ದರು. ಅವರ ಹೆಸರುಗಳು ಗೊತ್ತಿರುವುದಿಲ್ಲ. ನಿಪಿ.27 ಮತ್ತು 28 ಫೋಟೋಗಳಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು ಇರುವುದಿಲ್ಲ. ಬಿಳಿ ಬಣ್ಣದ ಸ್ಕಾರ್ಪಿಯೋ ನಲ್ಲಿ ಯಾವ ಬಣ್ಣದ ಪ್ಲೋರ್ ಮ್ಯಾಟ್ ಇತ್ತು ಎನ್ನುವುದು ಗೊತ್ತಿಲ್ಲ. ಎರಡು ವಾಹನಗಳ ಒಳಗಡೆ ನಾನು ನೋಡಿಲ್ಲ. ಪಂಚನಾಮೆಗೆ ಮಾಗಡಿ ರೋಡ್ ಸ್ಟೇಷನ್ ಹಿಂಭಾಗದಲ್ಲಿ ರುಜು ಮಾಡಲಾಯಿತು. ಪಿಐ ಗಿರೀಶ್ ನಾಯಕ್ ರವರ ಹೆಸರನ್ನು ಮೊದಲಿಗೆ ಪಿಐ ನಾಗೇಶ್ ರವರು ಹೇಳಿದರು ನಂತರ 14 ನೇ ಆರೋಪಿ ಹೇಳಿದನು. ಪಿಐ ಗಿರೀಶ್ ನಾಯಕ್ ರವರು ನನಗೆ ನೋಟೀಸ್ ಕೊಟ್ಟಿರುವುದಿಲ್ಲ.

ಈ ಹಂತದಲ್ಲಿ ಮಧ್ಯಾಹ್ನದ ಊಟದ ಸಮಯವಾಗಿರುವುದರಿಂದ ಪಾಟೀ ಸವಾಲನ್ನು 2 ನೇ ಅವಧಿಗೆ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಐ.ಪಿ.ನಾಯಿಕ)
56 ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.

ಮಧ್ಯಾಹ್ನ 3.20 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ **16** ನೇ ಆರೋಪಿ ಪರವಾಗಿ ಶ್ರೀ**.**ಡಿ **.**ಕೆ ವಕೀಲರಿಂದಃ

ಪೊಲೀಸ್ ಠಾಣೆಯ ಒಳಗೆ ಹೋದಾಗ ರಾತ್ರಿ 10.00 ಗಂಟೆಯಾಗಿತ್ತು. ಮಹಜರ್ ಮುಗಿದಾಗ ಸಮಯ ರಾತ್ರಿ 11.50 ಗಂಟೆಯಾಗಿತ್ತು. ಮಾಗಡಿ ರಸ್ತೆ ಪೊಲೀಸ್ ಠಾಣೆ ಹಿಂಭಾಗದ ಮಹಜರ್ ಮಾಡಿರುತ್ತಾರೆ ಎನ್ನಲಾದ ಸ್ಥಳದ ಪೂರ್ವಕ್ಕೆ ಖಾಲಿ ಜಾಗ ಮತ್ತು ಒಂದು ಶೆಡ್ ಇತ್ತು. ಉತ್ತರಕ್ಕೆ ಸಾರ್ವಜನಿಕ ರಸ್ತೆ ಇದೆ. ಸದರಿ ರಸ್ತೆಯು ಸ್ಟೇಷನ್ ಮುಂದಿರುವ ರಸ್ತೆಗೆ ಸೇರುತ್ತದೆ. ಪಶ್ಚಿಮಕ್ಕೆ ಟ್ರಾಫಿಕ್ ಪೊಲೀಸ್ ಠಾಣೆ ಇತ್ತು. ನಾನು ಹೇಳಿರುವ ಚಕ್ಕುಬಂಧಿಯಲ್ಲಿ ಪೊಲೀಸರು ಮಹಜರ್ ಮಾಡಿಲ್ಲ, ಮಹಜರ್ ಗೆ ನಾನು ಪೊಲೀಸ್ ಠಾಣೆಯಲ್ಲಿ ರುಜು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಠಾಣೆಯಲ್ಲಿ ಎರಡು ಮಹಜರ್ ಗೆ ಹೋಗಬೇಕೆಂದು ನೋಟೀಸ್ ಕೊಟ್ಟಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿದಾರರು ಮೊದಲಿಗೆ ಮಾಗಡಿ ರಸ್ತೆ ಪೊಲೀಸ್ ಠಾಣೆಯ ಬಳಿ ಮಹಜರ್ ಗೆ ಹೋಗುವುದಕ್ಕಾಗಿ ಮಾತ್ರ ನೋಟೀಸ್ ಕೊಟ್ಟಿದ್ದರು ಎಂದು ನುಡಿದಿರುತ್ತಾರೆ. 2 ನೇ ಬಾರಿಯ ಮಹಜರ್ ಗೆ ನನಗೆ ನೋಟೀಸ್ ಕೊಟ್ಟಿರುವುದಿಲ್ಲ. 2 ನೇ ಬಾರಿ ಮಹಜರ್ ಮಾಡಿದ ಸ್ಥಳದ ಪೂರ್ವಕ್ಕೆ ವೆಂಕಟೇಶ್ವರ ನಿಲಯ ಎಂಬ ಹೆಸರಿನ ಮನೆ ಇತ್ತು. ಆ ಮನೆ ನಂಬರ್ ಗೊತ್ತಿಲ್ಲ. ಅದೇ ರೀತಿಯಾಗಿ ಪಶ್ಚಿಮಕ್ಕೂ ಸಹ ಮನೆ ಇತ್ತು. ಅದು ಯಾರ ಮನೆ

ಎಂಬುದು ಗೊತ್ತಿಲ್ಲ. ಉತ್ತರಕ್ಕೆ ಏನಿತ್ತು ಎಂಬುದು ಗೊತ್ತಿಲ್ಲ. ದಕ್ಷಿಣಕ್ಕೆ ಸಾರ್ವಜನಿಕ ರಸ್ತೆ. ನಿಪಿ.32 ಕ್ಕೆ ಓದಿ ರುಜು ಮಾಡಿರುತ್ತೇನೆ. ನಿಪಿ.32 ಕ್ಕೆ ಸ್ಥಳದಲ್ಲಿಯೇ ಪ್ರಿಂಟ್ ತೆಗೆದು, ಓದಿ ಹೇಳಿರುತ್ತಾರೆ, ನಂತರ ನಾನು ಓದಿ ರುಜು ಮಾಡಿರುತ್ತೇನೆ.

ಯಾವ ಲ್ಯಾಪ್‌ಟಾಪ್ ನಿಂದ ಬೆರಳಚ್ಚು ಮಾಡಿರುತ್ತಾರೆ ಮತ್ತು ಯಾವ ಪ್ರಿಂಟರ್ ನಿಂದ ಪ್ರಿಂಟ್ ತೆಗೆದಿರುತ್ತಾರೆ ಅಂತ ಹೇಳಲು ಆಗುವುದಿಲ್ಲ. ನಿಪಿ.30 ರ ನಾನು ನಿಂತ ಸ್ಥಳದಿಂದ ಎಡಭಾಗದಲ್ಲಿ ರಾಮಮೂರ್ತಿ, ಆತನ ಎಡಭಾಗದಲ್ಲಿ ನಿಂತ ಪಿಐ ಹೆಸರು ನಾಗೇಶ್. ನನ್ನ ಬಲ ಭಾಗದಲ್ಲಿ ನಿಂತ ಪೊಲೀಸ್ ಸಿಬ್ಬಂದಿ ಯಾರು ಎಂದು ಗೊತ್ತಿರುವುದಿಲ್ಲ. ನಿಪಿ.30 ಪೋಟೋದಲ್ಲಿ ಮು.ಮಾ 27 ನ್ನು ಕೊಡುತ್ತಿದ್ದರು. ನಿಪಿ.30 ಮತ್ತು ನಿಪಿ.31 ಪೋಟೋದಲ್ಲಿ ನಿಪಿ.32 ಮಹಜರ್ ಕಾಲಕ್ಕೆ ಅಮಾನತ್ತುಪಡಿಸಿಕೊಂಡಿರುವ ಬಟ್ಟೆಗಳು ಕಾಣುವುದಿಲ್ಲ. ನಿಪಿ.30 ಮತ್ತು ನಿಪಿ.31 ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಬಟ್ಟೆಗಳು ಕಾಣುವುದಿಲ್ಲ. ಪಿಐ ನಾಗೇಶ್‌ರವರ ಮೊಬೈಲ್‌ನಿಂದ ನಿಪಿ.30 ಮತ್ತು ನಿಪಿ.31 ಪೋಟೋಗಳನ್ನು ತೆಗೆಯಲಾಗಿದೆ. ನಿಪಿ.30 ಮತ್ತು 31 ಪೋಟೋಗಳನ್ನು ಎಲ್ಲಿ ಪ್ರಿಂಟ್ ಔಟ್ ತೆಗೆದುಕೊಂಡಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ನಿಪಿ.27 ಮತ್ತು ನಿಪಿ.28 ಪೋಟೋಗಳನ್ನು ಎಲ್ಲಿ ಪ್ರಿಂಟ್‌ಔಟ್ ತೆಗೆದುಕೊಂಡಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ಸ್ಥಳದಲ್ಲಿಯೇ ನನ್ನಿಂದ ಮುಚ್ಚಳಿಕೆ ಬರೆಸಿಕೊಂಡಿರುತ್ತಾರೆ. ನಿಪಿ.32 ರಂತೆ ಮಹಜರ್ ಮಾಡಿದಾಗ ಮುಚ್ಚಳಿಕೆಗೆ ನನ್ನ ರುಜು ಪಡೆದಿರುತ್ತಾರೆ.

ನಿಪಿ.34 ನ್ನು ನಾನು ಹೇಳಿ ಬೆರಳಚ್ಚು ಮಾಡಿಸಿರುತ್ತೇನೆ. ಕ್ರೈಂ ನಂ.250/2024 ರಲ್ಲಿ ಯಾವ ಶಿಕ್ಷಾರ್ಹವಾದ ಕಲಂ ನಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ ಅಂತ ಹೇಳಿಲ್ಲ. ಸಾಕ್ಷಿದಾರರು ಮುಂದುವರಿದು ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು ಎಂದು ನುಡಿದಿರುತ್ತಾರೆ. ನಿಪಿ.27 ರಲ್ಲಿ ಕಂಡ ವಾಹನವು ಇಂತಹವರಿಗೆ ಸೇರಿದ್ದು ಅಂತ ಹೇಳಿ ಅದರ ಆರ್.ಸಿ ಬುಕ್ ತೋರಿಸಿಲ್ಲ. ನಿಪಿ.28 ರಲ್ಲಿ ಕಂಡ ವಾಹನ ಯಾರಿಗೆ ಸೇರಿದ್ದು ಅಂತ ಹೇಳಿದ್ದರು. ಆರ್.ಸಿ ಬುಕ್ ತೋರಿಸಿಲ್ಲ.

ಮಹಜರ್ ನಲ್ಲಿ ಬರೆದ ಸಂಗತಿಯನ್ನು ಯಾರು ಹೇಳಿದ್ದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾನೇ ಕಣ್ಣಾರೆ ಕಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಪ್ರಕರಣದ ಮಾಹಿತಿಯನ್ನು ಮಹಜರ್ ಕಾಲಕ್ಕೆ 14 ನೇ ಆರೋಪಿ ನನ್ನ ಮುಂದೆ ಹೇಳಿರುತ್ತಾನೆ. ನಾನು 14 ನೇ ಆರೋಪಿಯನ್ನು ಠಾಣೆಯಲ್ಲಿ ನೋಡಿದಾಗ ಆತನಿಗೆ ಕೈ ಕೋಳ ಹಾಕಿರಲಿಲ್ಲ. 14 ನೇ ಆರೋಪಿಯ ಮನೆಗೆ ಹೋಗುವಾಗ ನನ್ನ ಜೊತೆಗೆ ಪಿಎಸ್ಐ ಭರಣಿ ಮತ್ತು ಮತ್ತೊಬ್ಬ ಚಾಲಕ ಇದ್ದನು. ಚಾಲಕನ ಹೆಸರು ಗೊತ್ತಿಲ್ಲ. "ಕೆ " ಎಂಬ ಇಂಗ್ಲೀಷ್ ಅಕ್ಷರದಿಂದ ಮೊಹರು ಮಾಡಿದ್ದರು. ಮು.ಮಾ 21 ರ ಮೇಲೆ "ಕೆ " ಎಂಬ ಇಂಗ್ಲೀಷ್ ಅಕ್ಷರದ ಮೊಹರು ಇದೆ. ಕೂದಲುಗಳನ್ನು ಇಟ್ಟ ಬಿಳಿ ಪೇಪರ್ ಮೇಲೆ ನನ್ನ ರುಜು ಇರುವುದಿಲ್ಲ.

ನಿಪಿ.32 ಮತ್ತು ನಿಪಿ.34 ರಂತೆ ನನ್ನ ಮುಂದೆ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ

26ರ ಮೇಲೆ Solima ಅಂತ ನಮೂದು ಇದೆ, ಅದನ್ನು ಮಹಜರ್ ನಲ್ಲಿ ಬರೆದಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಮು.ಮಾ 26 After Dark ವಾಟರ್ ಬಾಟರ್ ಅಂತ ಹೇಳಿರುತ್ತೇನೆ ಎಂದರೆ ಸಾಕ್ಷಿದಾರರು Solima ವಾಟರ್ ಬಾಟಲ್ ಅಂತ ಹೇಳಿರುತ್ತೇನೆ ಎಂದು ನುಡಿದಿರುತ್ತಾರೆ. ನಾನೊಬ್ಬ ರೌಡಿ ಶೀಟರ್ ಆಗಿರುವುದರಿಂದ ಪೊಲೀಸರಿಗೆ ಹೆದರಿ ಮಹಜರ್ ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಚಾಸಾ 18 ರಾಮಮೂರ್ತಿ ಇವರು ನನ್ನ ಸ್ನೇಹಿತ ಎಂದರೆ ಸಾಕ್ಷಿದಾರರು ನನ್ನ ಪರಿಚಯಸ್ಥ ಎಂದು ನುಡಿದಿರುತ್ತಾರೆ. ನಾವಿಬ್ಬರೂ ಒಟ್ಟಿಗೆ ಮದ್ಯಪಾನ ಮಾಡಲು ಹೋಗುವುದಿಲ್ಲ. ಚಾಸಾ 18 ಇವರು ನನಗೆ 10-15 ವರ್ಷಗಳಿಂದ ಪರಿಚಯ. ಚಾಸಾ 18 ಇವರು ರೌಡಿ ಶೀಟರ್ ಅಲ್ಲ ಮತ್ತು ಆತನ ವಿರುದ್ಧ ಯಾವುದೇ ಕೇಸು ದಾಖಲಾಗಿರುವುದಿಲ್ಲ. ಚಾಸಾ 18 ರವರು ಠಾಣೆಯ ಹೊರಭಾಗದಲ್ಲಿದ್ದರು. ನಾವಿಬ್ಬರೂ ಒಟ್ಟಿಗೆ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಠಾಣೆಯ ಬಳಿ ಇದ್ದ 50 ರಿಂದ 100 ರಲ್ಲಿ ನನಗೆ ಪರಿಚಯ ಇದ್ದವರು ಯಾರೂ ಇರಲಿಲ್ಲ. ಈ ಜನರಲ್ಲಿ ಚಾಸಾ 18 ರವರು ಇದ್ದರು.

ನನ್ನ ಫೋನ್ ನಂಬರ್ ನನಗೆ ಪರಿಚಯ ಇರುವ ಪೊಲೀಸರ ಬಳಿ ಮೊದಲೇ ಇತ್ತು ಎಂದರೆ ಸರಿಯಲ್ಲ. ಮಹಜರ್ ಆದ ನಂತರ ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಇತ್ತೀಚೆಗೂ ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಈ ಪ್ರಕರಣದ ಮಹಜರ್ ಗಳನ್ನು ಮಾಡಿದ ನಂತರ ಬ್ಯಾಡರ ಹಳ್ಳಿ ಪೊಲೀಸರು ರೌಡಿ ಶೀಟರ್ ಕವಾಯತ್ತು ಪೆರೆಡ್‌ಗೆ ಸುಮಾರು 10 ರಿಂದ

15 ಬಾರಿ ಕರೆಸಿದ್ದರು. ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ಹೊಂದಿರುವ ಎ.ಸಿ.ಪಿ ಯಾರು ಎಂದು ಗೊತ್ತಿಲ್ಲ. ಪೊಲೀಸರಿಗೆ ಹೆದರಿ ಅವರು ಹೇಳಿ ಕೊಟ್ಟಿರುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ 19 ರಿಂದ 29 ನ್ನು ನನ್ನ ಮುಂದೆ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 13 ನೇ ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ರೂ.200/- ಖರ್ಚಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಐ.ಪಿ.ನಾಯಿಕ)
56 ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.

ದಿಃ03.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

**ಪಾಟೀ ಸವಾಲುಃ 10 ನೇ ಆರೋಪಿ ಪರ ವಕೀಲರಿಂದಃ**

10 ನೇ ಆರೋಪಿತರ ಪರ ಯಾರೂ ಪ್ರತಿನಿಧಿಸಿರುವುದಿಲ್ಲ, ಆದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

13 ನೇ ಆರೋಪಿ ಪರ ವಕೀಲರು ಆತ ತಮಗೆ ಈ ಸಾಕ್ಷಿ ಪಾಟೀ ಸವಾಲು ಮಾಡಲು ಮಾಹಿತಿ ಕೊಟ್ಟಿರುವುದಿಲ್ಲ ಎಂದು ಪ್ರಸ್ತಾಪಿಸಿರುತ್ತಾರೆ. ನ್ಯಾಯದ ದೃಷ್ಟಿಯಿಂದ 13 ನೇ ಆರೋಪಿಗೆ ಪಾಟೀ ಸವಾಲು ಮಾಡಲು ಒಂದು ಅವಕಾಶ ಕೊಟ್ಟರೂ 13 ನೇ ಆರೋಪಿ ಪಾಟೀ ಸವಾಲು ಮಾಡಲು ಉತ್ಸುಕತೆ ತೋರಿರುವುದಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ **4, 6** ರಿಂದ **9, 15** ರಿಂದ **17** ಆರೋಪಿತರ ಪರವಾಗಿ ಶ್ರೀ.ಆರ್. ಆರ್ ವಕೀಲರಿಂದಃ

ರೌಡಿ ಶೀಟರ್ ಗಳ ಪೆರೇಡ್ ಮಾಡುವ ಕಾಲಕ್ಕೆ ಅಪರಾಧ ವಿಭಾಗದ ಪೊಲೀಸರು ನಮಗೆ ಕರೆ ಮಾಡಿ ಕರೆಸುತ್ತಾರೆ. ಸಾಮಾನ್ಯವಾಗಿ ಪೊಲೀಸ್ ಠಾಣೆಗೆ ಹೋಗಿ ಬರುತ್ತಿರುವುದರಿಂದ ಪೊಲೀಸರ ಪರಿಚಯ ಇದೆ. ಪೊಲೀಸರು ಮಾಡುವ ಮಹಜರ್ ಪ್ರಕ್ರಿಯೆಗಳ ಬಗ್ಗೆ ನನಗೆ ಮಾಹಿತಿ ಇದೆ. ಕೂದಲುಗಳನ್ನು ಕಾರ್ ನಿಂದ ಯಾವ ರೀತಿಯಾಗಿ ತೆಗೆಯುತ್ತಾರೆ ಮತ್ತು ಯಾವ ರೀತಿಯಾಗಿ ಶೇಖರಿಸುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ರೌಡಿ ಶೀಟರ್ ಗಳಿಗೆ

ಪೊಲೀಸರು ನೋಟೀಸ್ ಕೊಡುವಂತೆ ನನಗೆ ನೋಟೀಸ್ ಕೊಟ್ಟಾಗ ಅದನ್ನು ನಾನು ಸಂಪೂರ್ಣವಾಗಿ ಪರಿಶೀಲಿಸುವುದಿಲ್ಲ.

ನನ್ನ ವಿರುದ್ಧ ಪ್ರಕರಣ ದಾಖಲಾದಾಗ ಕೊಟ್ಟ ನೋಟೀಸ್‌ಗೆ ರುಜು ಮಾಡುವಂತೆ ನಿಪಿ.32 ಕ್ಕೆ ನಾನು ರುಜು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.32 ನ್ನು ನಾನು ಓದಿಲ್ಲ. ಉಳಿದ ಪಾಟೀ ಸವಾಲನ್ನು ಈ ಮೇಲೆ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಪಾಟೀ ಸವಾಲುಃ **2** ನೇ ಆರೋಪಿ ಪರವಾಗಿ ಪಾಟೀ ಸವಾಲು ಇಲ್ಲ ಅಂತ ಆತನ ಪರ ವಕೀಲರು ಹೇಳಿರುತ್ತಾರೆ**.**

ಪಾಟೀ ಸವಾಲುಃ **11** ಮತ್ತು **12** ನೇ ಆರೋಪಿತರ ಪರವಾಗಿ ಶ್ರೀ**.**ಎಸ್**.**ಕೆ**.**ಎಸ್ ವಕೀಲರಿಂದಃ

ಕ್ಯಾಬ್ ಓಡಿಸುವವರು ಟ್ರಿಪ್ ಶೀಟ್ ನಿರ್ವಹಿಸುತ್ತಾರೆ ಎಂದರೆ ಸಾಕ್ಷಿದಾರರು ಓಲಾ ಮತ್ತು ಊಬರ್ ಕ್ಯಾಬ್ ಓಡಿಸುವವರು ಟ್ರಿಪ್ ಶೀಟ್ ನಿರ್ವಹಿಸುವುದಿಲ್ಲ ಎಂದು ನುಡಿದಿರುತ್ತಾರೆ. ಓಲಾ ಮತ್ತು ಊಬರ್ ಕ್ಯಾಬ್ ಗಳನ್ನು ಮೊಬೈಲ್‌ನಲ್ಲಿರುವ ಆ್ಯಪ್ ಮೂಲಕ ಬುಕ್ ಮಾಡುತ್ತಾರೆ. ಆದ್ದರಿಂದ ಬುಕ್ಕಿಂಗ್ ಹಿಸ್ಟರಿ ಸಿಗುತ್ತದೆ ಎಂದರೆ ಸರಿ.

ದಿಃ13.06.2024 ರಂದು ನನ್ನ ಮೊಬೈಲ್ ನಲ್ಲಿರುವ ಬುಕ್ಕಿಂಗ್ ಆ್ಯಪನ್ನು ಪರಿಶೀಲಿಸಿದಾಗ ಯಾರು ಯಾವ ಸ್ಥಳಕ್ಕೆ ನನ್ನ ಕಾರನ್ನು ಬುಕ್ ಮಾಡಿದ್ದರು, ಯಾವ ಸಮಯಕ್ಕೆ ಬುಕ್ ಮಾಡಿದ್ದರು ಎನ್ನುವುದು ತಿಳಿಯುತ್ತದೆ. ನನ್ನ ಕಾರಿನ ನಂಬರ್ ಪ್ಲೇಟ್ ಹಳದಿ ಬಣ್ಣದಾಗಿದ್ದು, ಅದಕ್ಕೆ ಜಿಪಿಎಸ್ ಅಳವಡಿಸುವುದು

ಕಡ್ಡಾಯ ಎಂದರೆ ಸರಿ. ನನ್ನ ಮೊಬೈಲ್ ನಲ್ಲಿರುವ ಜಿಪಿಎಸ್ ಆ್ಯಪನ್ನು ನೋಡಿದಾಗ ನಾನು ದಿಃ13.06.2024 ರಂದು ಎಲ್ಲೆಲ್ಲಿ ಕಾರ್ ಓಡಿಸಿರುತ್ತೇನೆ ಎಂಬುದು ಗೊತ್ತಾಗುತ್ತದೆ ಎಂದರೆ ಸಾಕ್ಷಿದಾರರು ನನ್ನ ಮೊಬೈಲ್ ನಲ್ಲಿ ಜಿಪಿಎಸ್ ಆ್ಯಪ್ ಇರಲಿಲ್ಲ ಎಂದು ನುಡಿದಿರುತ್ತಾರೆ.

ನಾನು ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಗೆ ಹೋದಾಗ ಕಾಮಾಕ್ಷಿ ಪಾಳ್ಯ ಪೊಲೀಸರು ಕಾರ್ ಗಳನ್ನು ತೆಗೆದುಕೊಂಡು ಹೋಗಿ ಮಾಗಡಿ ರೋಡ್ ಪೊಲೀಸ್ ಠಾಣೆಯ ಹಿಂಭಾಗದಲ್ಲಿ ನಿಲ್ಲಿಸಿರುತ್ತಾರೆ ಎನ್ನುವುದು ಗೊತ್ತಾಯಿತು ಎಂದರೆ ಸರಿ. ಈ ಮೇಲೆ ಹೇಳಿದ ವಿಷಯವನ್ನು ಪೊಲೀಸರು ನಿಪಿ.32 ಮಹಜರ್ ನಲ್ಲಿ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ.32 ರ (ಚಾರ್ಜ್ ಶೀಟ್ ಪುಟ ಸಂಖ್ಯೆ 394) 2 ನೇ ಪುಟ ಸಂಖ್ಯೆ 13 ನೇ ಸಾಲಿನಲ್ಲಿ ಬರೆದಿರುವ "ಬಿಡದಿ ಟೋಲ್ ಹತ್ತಿರ ಬಂದಾಗ ------------------- ಮಾಗಡಿ ರಸ್ತೆಗೆ ತಂದು ನಿಲ್ಲಿಸಿ " ಅಂತ ಬರೆದ ಸಂಗತಿ ನನಗೆ ಗೊತ್ತಿಲ್ಲ. 11 ಮತ್ತು 12 ನೇ ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಆ ಭಾಗವನ್ನು ನಿಡಿ.29 ಎಂದು ಗುರುತಿಸಲಾಯಿತು. ಪಂಚರನ್ನು, ಆರೋಪಿತರನ್ನು ಹೊರತುಪಡಿಸಿ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಿಂದ ಮಾಗಡಿ ರೋಡ್ ಪೊಲೀಸ್ ಠಾಣೆಯ ಹಿಂಭಾಗಕ್ಕೆ ಕಾರನ್ನು ಅಮಾನತ್ತುಪಡಿಸಿಕೊಳ್ಳಲು ಸುಮಾರು 7 -8 ಜನ ಪೊಲೀಸ್ ಸಿಬ್ಬಂದಿಗಳು ಇದ್ದರು. ನಿಖರವಾಗಿ ಎಷ್ಟು ಜನ ಪೊಲೀಸ್ ಸಿಬ್ಬಂದಿ ಇದ್ದರು ಎಂದು ಹೇಳಲು

ಆಗುವುದಿಲ್ಲ. ನನ್ನ ಸಮ್ಮುಖದಲ್ಲಿ ನಮ್ಮ ಜೊತೆಗೆ ಬಂದಿದ್ದ 7-8 ಜನ ಪೊಲೀಸರು ನಿಪಿ.32 ಕ್ಕೆ ಸಹಿ ಮಾಡಿರುವುದಿಲ್ಲ.

ನನಗೆ ಪ್ರತ್ಯೇಕವಾಗಿ ನೋಟೀಸ್ ಕೊಟ್ಟಿದ್ದರು ಎಂದರೆ ಸಾಕ್ಷಿದಾರರು ಮನೆಗೆ ಬಂದು ನೋಟೀಸ್ ಕೊಟ್ಟಿದ್ದರು ಎಂದು ನುಡಿದಿರುತ್ತಾರೆ. ನೋಟೀಸ್ ನಲ್ಲಿ ಮಾಗಡಿ ರೋಡ್ ಪೊಲೀಸ್ ಠಾಣೆಯ ಬಳಿ ಬರುವಂತೆ ಹೇಳಿರಲಿಲ್ಲ. ಪೊಲೀಸರು ನನ್ನನ್ನು ಕರೆದಾಗ ನನ್ನ ಸಮ್ಮುಖದಲ್ಲಿ ಆರೋಪಿತರ ಹೇಳಿಕೆ ಮಾಡಿಕೊಂಡಿರುವುದಿಲ್ಲ. ಪೊಲೀಸರಿಗೆ ಹೆದರಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಸೂಕ್ತ ಕಾರಣಗಳು ಇಲ್ಲದ ಕಾರಣ 1 ನೇ ಆರೋಪಿ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇರುವುದಿಲ್ಲ

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಐ.ಪಿ.ನಾಯಿಕ)
56 ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.